ಅಧ್ಯಕ್ಷರು: ಮಾನ್ಯ ಕೃಷ್ಣಪ್ಪನವರೆ, ಉತ್ತರ ಹೇಳಿ ಸಾಕು.

ಶ್ರೀ ಎ.ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಂದ್ರನಾಥ್‌ರವರು ಹೇಳಿರುವ ವಿಚಾರದಲ್ಲಿ ನಾವೂ ಕೂಡ ಅಷ್ಟೇ ಸೀರಿಯಸ್ ಆಗಿದ್ದೇವೆ. ಆದರೆ ಕೆಲವೊಮ್ಮೆ ಆಡಳಿತ ವರ್ಗದವರು ನಮ್ಮ ಮೇಲೆ ಕ್ರಮ ತೆಗೆದುಕೊಂಡಾಗ ಕೋರ್ಟ್‌ಗಳಿಗೆ ಹೋಗಿರುವಂಥ ಸಂದರ್ಭಗಳು ಇವೆ. ಈಗ ಕೇಂದ್ರದವರು ಲಿಬರಲೈಸ್ ಮಾಡಿ, ಸ್ವಲ್ಪ.ಸಡಿಲ ಮಾಡಿ ಶುಗರ್ ಕಂಟ್ರೋಲ್ ಆಕ್ಟ್ ಬಗ್ಗೆ ರಾಜ್ಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದಾರೆ. ಅದರನ್ವಯ ನಾವು ಈಗಾಗಲೇ ಒಂದು ಕಾರ್ಯಾನೆ ಮೇಲೆ ಅಪ್ಲೈ ಮಾಡಿದ್ದೇವೆ. ಅದರದ್ದು ರಿಫರ್‌ಕೇಷನ್ ಈಗ ಬಂದಿದೆ, ಲೀಗಲ್ ರಿಫರ್‌ಕೇಷನ್ಸ್, ಟೆಕ್ನಿಕಲ್ ರಿಫರ್‌ಕೇಷನ್ಸ್ ಬಂದಿದೆ. ಆ ಒಂದು ಅಮೆಂಡೆಡ್ ರೂಲ್ಸ್‌ನ್ನು ಭಾರತ ಸರ್ಕಾರ ನಮಗೇನು ಕೊಟ್ಟಿತ್ತೋ ಅದರ ಮೇಲೆ ಕೆಲವು ಕ್ಲಾರಿಫಿಕೇಷನ್ಸ್ ಕೊಡಿ, ಆಗ ಮಾತ್ರ we will have more powers. ನಮಗೆ ಹೆಚ್ಚಿನ ಅಧಿಕಾರ ಬರುತ್ತದೆ ಎಂದು ಹೇಳಿ ಕೇಂದ್ರ ಸರ್ಕಾರಕ್ಕೆ ನಾವು ಕೇಳಿಕೊಂಡಿದ್ದೇವೆ. ಅದು ಬಂದ ಮೇಲೆ ರೈತರ ರಕ್ಷಣೆ ಮಾಡುವ ಸಲುವಾಗಿ ಯಾರ್ಯಾರ ಮೇಲೆ ಎಂಥೆಂಥ ಪ್ರಿಂಜೆಂಟ್ ಆಕ್ಷನ್ ತೆಗೆದುಕೊಳ್ಳಬೇಕಾಗುತ್ತದೋ ಆ ರೀತಿಯ ಕ್ರಮವನ್ನು ಸರ್ಕಾರ ತೆಗೆದುಕೊಳ್ಳಲು ಬದ್ಧವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಬೆಳಗಾವಿ ಜಿಲ್ಲೆಯಲ್ಲಿ ಶಾಲಾ ಕೊಠಡಿಗಳ ನಿರ್ಮಾಣ.

197(2159)

ಶ್ರೀ ಉಮೇಶ್ ವಿಶ್ವನಾಥ ಕತ್ತಿ(ಹುಕ್ಕೇರಿ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಳಗಾವಿ ಜಿಲ್ಲೆಯಲ್ಲಿ ಈ ವರ್ಷ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಿಸಲು ಸರ್ಕಾರದಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ?

ಆ. ಸರ್ಕಾರದಿಂದ ಬಿಡುಗಡೆ ಮಾಡಿದ ಅನುದಾನದಲ್ಲಿ ಬೆಳಗಾವಿ ಜಿಲ್ಲೆಯ ಪ್ರತಿ ತಾಲ್ಲೂಕಿಗೆ ಎಷ್ಟು ಶಾಲಾ ಕೊಠಡಿ ನಿರ್ಮಿಸಲಾಗಿದೆ?

ಶ್ರೀ ಹೆಚ್.ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ. 2001-2002ನೇ ಸಾಲಿನಲ್ಲಿ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆಗೆ ರೂ.9.00 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

ಆ. ಕ್ರಿಯಾ ಯೋಜನೆ ತಯಾರಿಸಿದ ನಂತರವೇ ತಾಲ್ಲೂಕುವಾರು ಮಾಹಿತಿ ಲಭ್ಯವಾಗುವುದು.

ಶ್ರೀ ಉಮೇಶ್ ಪಿ.ಕತ್ತಿ: ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳು ಬರುತ್ತವೆ. 18 ಗ್ರಾಮಸಭಾ ಕ್ಷೇತ್ರಗಳು ಬರುತ್ತವೆ. ಅಲ್ಲಿ 40 ಲಕ್ಷ ಜನಸಂಖ್ಯೆ ಇದೆ. ಇಂಥ ಜಿಲ್ಲೆಗೆ ಶಾಲಾ ಕಟ್ಟಡಕ್ಕಾಗಿ ಸರ್ಕಾರದವರು ಕೇವಲ 9 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇದು ಒಂದು ರೀತಿಯಲ್ಲಿ ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಹಾಕಿದ ಹಾಗೆ ಆಗಿದೆ. ಇಡೀ ರಾಜ್ಯದಲ್ಲಿಯೇ ಬೆಳಗಾಂ ಜಿಲ್ಲೆ ದೊಡ್ಡ ಜಿಲ್ಲೆಯಾಗಿದೆ. ಹೀಗಿರುವಾಗ ಕೇವಲ 9 ಲಕ್ಷ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿದರೆ ಹೇಗೆ? ಬೇಡಿಕೆ ಇರುವುದು 1000 ಕೊಠಡಿಗಳಿಗೂ ಹೆಚ್ಚಿದೆ. ಇಲ್ಲಿಗೆ 9 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಕ್ರಿಯಾ ಯೋಜನೆ ತಯಾರಿಸಿದ ನಂತರ ಮತ್ತೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ಈ ೯ ಲಕ್ಷ ರೂಪಾಯಿಗಳು ಆ ಕ್ರಿಯಾ ಯೋಜನೆಯನ್ನು ತಯಾರು ಮಾಡುವುದಕ್ಕೂ ಕೂಡ ಸಾಕಾಗುವುದಿಲ್ಲ. ಆದುದರಿಂದ ಮಾನ್ಯ ಶಿಕ್ಷಣ ಸಚಿವರು ಇದರ ಬಗ್ಗೆ ಸಮಸ್ತಾರವಾದ ಮಾಹಿತಿಯನ್ನು ಕೊಡಬೇಕು. ಇದರ ಜೊತೆಗೆ ವಿಶೇಷವಾಗಿ ಬೆಳಗಾಂ ಜಿಲ್ಲೆಗೆ ಶಾಲಾ ಕೊಠಡಿಗಳಿಗಾಗಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಕೆ.ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಗೆ ಸ್ಟೇಟ್ ಸೆಕ್ಟಾರ್‌ನಲ್ಲಿ ಶಾಲಾ ಕೊಠಡಿಗಳಿಗೋಸ್ಕರ 2.2 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. 9 ಲಕ್ಷ ರೂಪಾಯಿಗಳನ್ನು ಏಕೆ ಬಿಡುಗಡೆ ಮಾಡಲಾಯಿತು ಎಂದರೆ ಈಗಿರುವಂತೆ ಒಂದು ಶಾಲಾ ಕೊಠಡಿಗೆ ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು ಎಂದು ಇದೆ. ಆದರೆ ಇದನ್ನು ಹೆಚ್ಚು ಮಾಡಬೇಕಾದ ಅವಶ್ಯಕತೆ ಬಗ್ಗೆ ಪರಿಶೀಲನೆ ಮಾಡಬೇಕಾಗಿತ್ತು. ಅದನ್ನು ಪರಿಶೀಲನೆ ಮಾಡಿದ ನಂತರ ಈಗ ಒಂದು ಕೊಠಡಿಗೆ ಒಂದು ಲಕ್ಷದ 50 ಸಾವಿರ ರೂಪಾಯಿಗಳೆಂದು ನಿಗಧಿ ಮಾಡಲಾಗಿದೆ. ಈ ಕಾರಣದಿಂದ ಹಣ ಬಿಡುಗಡೆ ಮಾಡಲು ಸ್ವಲ್ಪ ತಡವಾಯಿತು. ಈಗ 1,50,000-00 ರೂಪಾಯಿಗಳನ್ನು ಒಂದು ಕೊಠಡಿ ಕಟ್ಟಲು ನಿಗಧಿ ಮಾಡಿದ್ದು ಈಗೇನು ಬೆಳಗಾಂ ಜಿಲ್ಲೆಗೆ 2.2 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು, ಅದನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದರ ಜೊತೆಗೆ ಬೆಳಗಾಂ ಜಿಲ್ಲೆಯಲ್ಲಿ ಗಡಿನಾಡು ಪ್ರದೇಶಗಳೆಲ್ಲವೂ ಸೇರಿಕೊಂಡಂತೆ 13 ಕೋಟಿ 10 ಲಕ್ಷ ರೂಪಾಯಿಗಳನ್ನು ಸುಮಾರು 881 ಕೊಠಡಿಗಳನ್ನು ಕಟ್ಟುವುದಕ್ಕೆ ನಾವು ರಿಸರ್ವ್ ಮಾಡಿ ಇಟ್ಟಿದ್ದೇವೆ. ಆದ್ದರಿಂದ ಮುಂದಿನ ದಿನಗಳಲ್ಲಿ ಬೆಳಗಾಂಗೆ ಬಂದು ನಾವು ಮೀಟಿಂಗ್ ಮಾಡಿ ನಮ್ಮ ಶಾಸಕರು ಹಾಗೂ ಜಿಲ್ಲಾ

ಪಂಚಾಯತಿಯವರೊಡನೆ ಮಾತನಾಡಿ ಎಲ್ಲಿ ಶಾಲಾ ಕೊಠಡಿ ಕಟ್ಟಲು ಮೊದಲು ಪ್ರೈಯಾರಿಟಿ ಕೊಡಬೇಕು ಎಂದು ತಿಳಿದುಕೊಳ್ಳುತ್ತೇವೆ. ಏಕೆಂದರೆ ಒಂದು ಪ್ಯಾಕೇಜ್ ಮಾಡಿ, ಬಾರ್ಡರ್ ಏರಿಯಾಗೆ ಸುಮಾರು 470 ಶಾಲೆಗಳನ್ನು ಕಟ್ಟಬೇಕೆಂದು ನಾವು ಇಟ್ಟುಕೊಂಡಿದ್ದೇವೆ. ಅದರ ಬಗ್ಗೆ ತಮ್ಮ ಜೊತೆ ಮಾತನಾಡಿ ಮಾಡುತ್ತೇವೆ. ಒಟ್ಟಾರೆ ಒಂದು ಸಾಪೆರ ಮೀರಿ ಬೆಳಗಾಂ ಜಿಲ್ಲೆಯಲ್ಲಿ ಶಾಲೆ ಕಟ್ಟಡ ಕಟ್ಟತಕ್ಕಂಥ ತೀರ್ಮಾನವಾಗಿದೆ.

ಶ್ರೀ ಉಮೇಶ್ ವಿಶ್ವನಾಥ ಕತ್ತಿ: ಮಾನ್ಯ ಶಿಕ್ಷಣ ಸಚಿವರು, ಬೆಳಗಾಂ ಜಿಲ್ಲೆಗೆ ಹೊಸದಾಗಿ ಶಾಲಾ ಕೊಠಡಿಗಳನ್ನು ಕಟ್ಟುವುದಕ್ಕೆಂದು 9 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆ ಮಾಡಲಾಗಿದೆ ಎಂದು ನೀವು ಹೇಳಿದರು ಅದರ ಮೇಲೆ ನಾನು ಪ್ರಶ್ನೆ ಕೇಳಿದ್ದು. ಇವತ್ತು ಸ್ಟೇಟ್ ಸೆಕ್ಟಾರ್‌ನಲ್ಲಿ ಎರಡು ಕೋಟಿ ಹತ್ತು ಲಕ್ಷ ರೂಪಾಯಿಗಳು ಹಾಗೂ ಐ.ಆರ್.ಡಿ.ಎಫ್.ನಲ್ಲಿ ಹದಿಮೂರು ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದಿರಿ. ಆದರೆ ಅದನ್ನು ತಕ್ಷಣ ಬಿಡುಗಡೆ ಮಾಡಿ ಹೊಸದಾಗಿ ಶಾಲಾ ಕೊಠಡಿಗಳ ಬೇಡಿಕೆ ಇದ್ದಂತಹವುಗಳನ್ನು ಕಟ್ಟುವಂತಹ ಕಾರ್ಯಕ್ರಮವನ್ನು ಇದೇ ವರ್ಷದಲ್ಲಿ ತಾವು ರೂಪಿಸಬೇಕೆಂದು ನಿಮ್ಮಲ್ಲಿ ವಿನಂತಿಸುತ್ತೇನೆ. ಅದರ ಜೊತೆಗೆ ಬೆಳಗಾವಿ ಜಿಲ್ಲೆಯಲ್ಲಿ ಅರ್ಧವಾಗಿರುವಂತಹ ಶಾಲಾ ಕೊಠಡಿಗಳು ಬಹಳ ಇದೆ. ನನಗೆ ತಿಳಿದಮಟ್ಟಿಗೆ ಬೆಳಗಾಂ ಜಿಲ್ಲೆಯಲ್ಲಿ 800 ರಿಂದ 900 ಶಾಲೆಗಳಲ್ಲಿ ಕಟ್ಟಡಗಳು ಅರ್ಧ ಮಟ್ಟದಲ್ಲಿ ನಿಂತುಕೊಂಡಂತಹ ಉದಾಹರಣೆಗಳಿವೆ. ಹೈಸ್ಕೂಲುಗಳು ಕೂಡ ಅರ್ಧದಲ್ಲೇ ನಿಂತುಕೊಂಡಂತಹ ಉದಾಹರಣೆಗಳಿವೆ. ಅವುಗಳನ್ನು ಪೂರ್ತಿ ಮಾಡುವಂತಹ ಕಾರ್ಯಕ್ರಮವನ್ನು ಸಹ ಸರ್ಕಾರ ಹಾಕಿಕೊಳ್ಳಬೇಕು. ಆ ವಿಚಾರದಲ್ಲಿ ಮಾನ್ಯ ಅಧ್ಯಕ್ಷರ ಮೂಲಕ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ತಾವು ಹಳೇ ಕೊಠಡಿಗಳನ್ನು ಮುಗಿಸುವಂತಹ ಕಾರ್ಯಕ್ರಮವನ್ನು ಮಾಡಿ ನಂತರ ಬರುವ ವರ್ಷ 800 ಶಾಲಾ ಕೊಠಡಿಗಳನ್ನು ಕಟ್ಟುತ್ತೇವೆಂದು ಹೇಳಿದಿರಿ. ಅದಕ್ಕೆ ನೀವು ಹಣ ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಇಡೀ ರಾಜ್ಯದಲ್ಲಿ ಒಟ್ಟು ಅಪೂರ್ಣ ಶಾಲಾ ಕಟ್ಟಡಗಳು 11,000ಕ್ಕೂ ಮೀರಿ ಇದೆಯೆಂದು ಲೆಕ್ಕ ಮಾಡಿ, ಅದಕ್ಕೆ ಈಗಾಗಲೇ 32 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ, ಈಗಾಗಲೇ 6,000ಕ್ಕೂ ಹೆಚ್ಚು ಅಪೂರ್ಣ ಕೊಠಡಿಗಳು ಪೂರ್ಣವಾಗಿವೆ. ಉಳಿದವುಗಳನ್ನು ಈ ವರ್ಷವಲ್ಲದೇ ಇದ್ದರೂ ಹಂತ ಹಂತವಾಗಿ ಮುಂದಿನ ವರ್ಷದಲ್ಲಿ ಅಪೂರ್ಣ ಕೊಠಡಿಗಳನ್ನು ಪೂರ್ಣ ಮಾಡುತ್ತೇವೆ.

ಶ್ರೀ ಉಮೇಶ್ ವಿಶ್ವನಾಥ್ ಕತ್ತಿ: ಈ ಬೆಳಗಾವಿ ಜಿಲ್ಲೆ ಅತೀ ದೊಡ್ಡ ಜಿಲ್ಲೆ. ಅದರ

ಜೊತೆಗೆ ಗಡಿ ಜಿಲ್ಲೆ. ಈ ಎರಡೂ ವಿಚಾರಗಳು ಸಹ ತಮ್ಮ ಗಮನದಲ್ಲಿರಬೇಕಾಗುತ್ತದೆ. ಎಲ್ಲಾ ಜಿಲ್ಲೆಗಳಿಗೆ ಸರಿಸಮನಾಗಿ ದುಡ್ಡು ಹಂಚುವುದನ್ನು ನೋಡಿದರೆ, ಬೆಳಗಾವಿ ಜಿಲ್ಲೆ ಬಹಳ ದೊಡ್ಡ ಜಿಲ್ಲೆ ಇರುವುದರಿಂದ, ನಾನು ಆಗಲೇ ಹೇಳಿದ ಹಾಗೆ ಬಕಾಸುರನ ಹೊಟ್ಟೆಗೆ ಒಂದು ಲೋಟ ಮಜ್ಜಿಗೆ ಕೊಟ್ಟಹಾಗೆ ಆಗುತ್ತದೆ. ಆದುದರಿಂದ ಬೆಳಗಾವಿ ಜಿಲ್ಲೆಗೆ ವಿಶೇಷವಾದಂತಹ ಗಮನವನ್ನು ಕೊಡಿ. ಶಾಲಾ ಕೊಠಡಿಗಳನ್ನು ಗಡಿ ಭಾಗದಲ್ಲಿ ಕಟ್ಟಬೇಕಾಗುತ್ತದೆ. ಆ ವಿಷಯಲ್ಲಿ ಸರ್ಕಾರ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುವುದರ ಜೊತೆಗೆ ಒಂದು ವರ್ಷದ ಹಿಂದೆ ನಿಲ್ಲಿಸಿರುವಂತಹ ಹಳೇ ಕೊಠಡಿಗಳನ್ನು ಪೂರ್ತಿ ಮುಗಿಸಿ ನಂತರ ಹೊಸ ಕೊಠಡಿಗಳ ನಿರ್ಮಾಣ ಕಾರ್ಯವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್: ಈಗಾಗಲೇ ಆ ರೀತಿಯ ಕಾರ್ಯಕ್ರಮವನ್ನು ರೂಪಿಸಲಾಗಿದೆ.

ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳಿಗೆ 2000-2001ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನ.

204(2603)

ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್‌ಗಳಿಗೆ 2000-01ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಅನುದಾನದ ಹಣವೆಷ್ಟು (ಜಿಲ್ಲಾವಾರು ವಿವರ ನೀಡುವುದು)?

ಆ) ಈವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ? (ಜಿಲ್ಲಾವಾರು ವಿವರ ನೀಡುವುದು)

ಇ) ಇದುವರೆಗೂ ಖರ್ಚು ಮಾಡಲಾಗಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):